ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	203 (192)
ಸದಸ್ಯರ ಹೆಸರು	:	ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	22-09-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ವಿಜಯಪುರ ನಗರದಲ್ಲಿ ರಸ್ತೆಗಳು ಹಾಳಾಗಿದ್ದು, ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು: (ವಿವರ ನೀಡುವುದು)	ವಿಜಯಪುರ ನಗರದಲ್ಲಿ ರಸ್ತೆಗಳ ಅಭಿವೃದ್ಧಿಯನ್ನು ಈ ಕೆಳಕಂಡಸರ್ಕಾರದ ವಿವಿಧ ಯೋಜನೆಗಳಲ್ಲಿ ಕೈಗೊಳ್ಳಲಾಗುತ್ತಿದೆ: (1)**14ನೇ ಹಣಕಾಸು ಆಯೋಗದ ಅನುದಾನ** (2015-16 ರಿಂದ 2019-20) ಅನುದಾನದಡಿಯಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳ ವಿವರವನ್ನು **ಅನುಬಂಧ-1**ರಲ್ಲಿ ಒದಗಿಸಿದೆ. (2) **15ನೇ ಹಣಕಾಸು ಆಯೋಗದ ಅನುದಾನ** (2020-21) 15ನೇ ಹಣಕಾಸು ಆಯೋಗದ ಅನುದಾನದಡಿಯಲ್ಲಿ ಕೈಗೊಳ್ಳಲಾಗುವ ಕಾಮಗಾರಿಗಳ ವಿವರವನ್ನು **ಅನುಬಂಧ-2ರಲ್ಲಿ** ಒದಗಿಸಿದೆ. (3) **ಗುಲ್ಬರ್ಗಾ ಸಚಿವ ಸಂಪುಟದ ಅನುದಾನ** :
ಆ)	ವಿಜಯಪುರ ನಗರದಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ ಯಾವ ಯಾವ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ? (ಸಂಪೂರ್ಣ ವಿವರ ನೀಡುವುದು)	ವಿಜಯಪುರ ಮಹಾನಗರ ಪಾಲಿಕೆಗೆ ಗುಲ್ಬರ್ಗಾ ಸಚಿವ ಸಂಪುಟ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು **ಅನುಬಂಧ-3** ರಲ್ಲಿ ಒದಗಿಸಿದೆ. (4) **ಮಾನ್ಯ ಮುಖ್ಯಮಂತ್ರಿಗಳ ರೂ.100.00 ಕೋಟಿ ವಿಶೇಷ ಅನುದಾನ ಹಂತ-3** : ಮಾನ್ಯ ಮುಖ್ಯಮಂತ್ರಿಗಳ ರೂ.100.00 ಕೋಟಿ ವಿಶೇಷ ಅನುದಾನ ಹಂತ-3ರ ಅನುದಾನದಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು**ಅನುಬಂಧ-4ರಲ್ಲಿ** ನೀಡಿದೆ. (5) **ಎಸ್.ಎಫ್.ಸಿ ಮುಕ್ತನಿಧಿ ಅನುದಾನದಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ:** 1) ವಾರ್ಡ್ ಸಂಖ್ಯೆ 16 ಗಾಂಧೀ ನಗರದಲ್ಲಿ ರಮೇಶ ದೊಡ್ಡಮನಿ ಮನೆಯಿಂದ ಹುನ್ನುಚಪ್ಪಾಣ ಮನೆಯವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು. 2) ವಾರ್ಡ್ ಸಂಖ್ಯೆ 15 ರಾಘವೇಂದ್ರಗುಡ್ರ ಮನೆಯಿಂದ ಸಿಂದಗಿ ನಾಕಾದವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು. 3) ವಾರ್ಡ್ ಸಂಖ್ಯೆ 15 ದೇವೇಂದ್ರ ಸವಣೂರ ಮನೆಯಿಂದ ವಾಸುದೇವ ದವಾಖಾನೆಯವರೆಗೆ ಸಿ.ಸಿ ರಸ್ತೆ ನಿರ್ಮಿಸುವುದು. 4) ನಾಗರಬಾವಡಿ ಅಂಗಡಿಯಿಂದ ಹಮಜಾ ಹುಸೇನಿ ದರ್ಗಾ ಮತ್ತು

		ಜೆ.ಬಿ.ಗಾರ್ಡ್‌ನಿಂದ ಮಹಾನಗರ ಪಾಲಿಕೆ ಆಯುಕ್ತರ ಕ್ವಾಟರ್ಸ್‌ವರೆಗೆ ರಸ್ತೆ ಅಭಿವೃದ್ಧಿಪಡಿಸುವುದು. 6) ಎಸ್.ಎಫ್.ಸಿ ವಿಶೇಷ ಅನುದಾನದಡಿ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳ ವಿವರ : ವಿಜಯಪುರ ನಗರದ ಲಾಲ ಬಹಾದ್ದೂರ ಶಾಸ್ತ್ರೀ ಮಾರುಕಟ್ಟೆಯಿಂದ ನೆಹರು ಮಾರ್ಕೆಟ್ ಮಾರ್ಗವಾಗಿ ಎ.ಪಿ.ಎಂ.ಸಿವರೆಗಿನ ಶ್ರೀ ಅಟಲ್ ಬಿಹಾರಿ ವಾಜಪೇಯಿ ರಸ್ತೆಯನ್ನು ಸಿ.ಸಿ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವುದು.

ಕಡತ ಸಂಖ್ಯೆ: ನಅಇ 292 ಎಸ್.ಎಫ್.ಸಿ 2020

(ಡಾ|| ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು